SRI D. DEVARAJ URS.—He is mixing up two issues. (1) Whether roads have been formed at all and without forming roads money has been spent and (2) the roads have been formed to places where he may not have agreed with There we cannot concede. Whatever he thinks proper-whether roads should be laid out, Government will certainly consider It does not mean Government should not lay roads in other places. Therefore, let him not mix up these two issues. ಯಾರದೋ ಮನೆಯ ಮುಂದೆ ರಸ್ತೆ ಮಾಡಿಬಿಟ್ಟು ಎಂದರೆ ಅದೆಲ್ಲಾ ಈಗ ಬೇಡ. ನೀವು ಕೇಳಿಂತಾ, ಇರುವುದು, ಸರ್ಕಾರದವರು ಖರ್ಚು ಮಾಡಿರುವ ದುಡ್ಡಿನಿಂದ ರಸ್ತೆ ಇಲ್ಲ ಎಂದರೆ Certainly we must look into. It is a serious allegation. The Hon. Minister has already stated that he is going to inquire into We shall certainly inquire into and punish the man if he has done so.

ಶ್ರೀ ಕೊಣಂದೂರು ಲಿಂಗಪ್ಪ.—ಏನಡನೆಯ ಪ್ರಶ್ನೆ ಏನೆಂದರೆ, ಸರ್ಕಾರದವರು ಎಲ್ಲಿ ರಸ್ತೆ ಆಗಬೇಕು, ಎಲ್ಲಿ ಸೇತುವೆಗಳು ಆಗಬೇಕು ಎನ್ನುವುದಕ್ಕೆ ನೀತಿಯನ್ನು ಏನಾದರೂ ಇಟ್ಟುಕೊಂಡಿದ್ದಾರೆಯೇ ? ಹೆಚ್ಚಾಗಿ ಸಾರ್ವಜನಿಕರಿಗೆ ಉಪಯೋಗವಾಗುವ ಕಡೆ, ಬಡವರು ಇರತಕ್ಕ ಕಡೆ, ನೂರಾರು ಮನೆಗಳು ಇರುವ ಕಡೆ ರಸ್ತೆಗಳು ಆಗಬೇಕೇ ಹೊರತು ಒಂದೊಂದು ಮನೆಗೆ ಎಂದು ರಸ್ತೆಯನ್ನು ಮಾಡಕೂಡದು. ಶ್ರೀಮಂತರ ಮನೆಯ ಮುಂದೆ ರಸ್ತೆಯನ್ನು ಮಾಡಿ ಟಾರ್ ಹಾಕಿಸಿರುವುದನ್ನು ತೋರಿಸಿದರೆ ತಾವು ರಾಜೀನಾಮೆ ಕೊಡುತ್ತೀರಾ ? ಕಾಂಗ್ರೆಸ್‌ನವರ ಮನೆಯ ಮುಂದೆ ರಸ್ತೆಯನ್ನು ಮಾಡಿಸಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ನಿಮಗೆ ಕಾಂಗ್ರೆಸ್‌ನವರನ್ನು ಕಟ್ಟಿಕೊಂಡು ಈಗ ಏನು ? ಕಾಂಗ್ರೆಸ್‌ನವರು ಮಾಡಿದಂಥ ರಸ್ತೆಯಲ್ಲೇನೀವು ನಡೆಯಬಾರದೇ ?

ಶ್ರೀ ಕೊಣಂದೂರು ಲಿಂಗಪ್ಪ.—ಕಲ್ಲಳ್ಳಿಗೆ ಮೂರು ಮೈಲಿ ದೂರದಲ್ಲಿ ಜನ ಏನು ಇದ್ದಾರೆ ಅಂಥ ಕಡೆ ರಸ್ತೆ ಮಾಡಬೇಕೇ ಏನಷ್ಟು ೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಬೇರೆ ಎಲ್ಲಿಯೋ ಮಾಡಿದರೆ ಏನು ಪ್ರಯೋಜನ?.

ಶ್ರೀ ಡಿ ದೇವರಾಜ ಅರಸ್.—ತಾವು ಇಂಥ ಕಡೆ ಇಂತಹ ರಸ್ತೆ ಮಾಡಿಸಬೇಕು ಎಂದು ಹೇಳಿದರೆ ಅದನ್ನೂ ಪರೀಕ್ಷೆ ಮಾಡಿಸೋಣ.

1-30 P. M.

A Post-Graduate Course in State Medical Colleges.

414. SRI KAGODU THIMMAPPA (Sagar).—Will the Minister for Health be pleased to state :—

(*a*) whether M. B B. S. Degree in all Government Medical Colleges is recognised by the Indian Medical Council ; if not, which are the Medical Colleges not recognised ;

(*b*) the number of post-graduate courses that are being conducted in the State Medical Colleges ; how many of them are recognised by the Indian Medical Council ;

(*c*) the conditions laid down by the Indian Medical Council for recognition of any Medical College ;

(*d*) whether the staff in Government Medical Colleges is inadequate or not according to the standards laid down by the Indian Medical Council ; if not, the reasons for non-recognition of one and recognition of the another Medical College ;

(*e*) the number of persons selected last year for these various courses ; among the selected candidates, how many belong to the State and how many are from other State ;

(*f*) whether there were not enough applications from the persons within the State ; if so, what made the authorities to prefer the candidates from outside the State?

SRI H. M. CHANNABASAPPA (Minister for Health).—

(*a*) All the Government Medical Colleges except the Medical College, Bellary have been recognised by the Indian Medical Council

(*b*) 78. Out of them only 23 are recognised by the Indian Medical Council.

(*c*) The conditions are laid down in the Medical Council of India. Minimum standard requirement for a Medical College for 100 admissions annually and they are in respect of Part-I Accommodation in the College and its associated teaching hospitals; Part II Staff Teaching and Technical and Part III-Equipments in the College Departments and in the hospitals,

(*d*) The staff in Government Medical Colleges at present is adequate as per the standards of the Indian Medical Council except in the Medical College, Bellary. The non-recognition of the Medical College, Bellary by the Indian Medical Council is due to the deficiency in staff in that College and insufficiency in bed strength, equipments, etc. as per the standards laid down by the Indian Medical Council ; as observed by the Indian Medical Council

(*e*) 241 persons were selected for post-graduate courses during the year 1976. Out of them, 197 persons belonged to Karnataka State and 44 persons belonged to other States.

(*f*) There were enough applications from persons within the State. There were no rules prohibiting admission of students not belonging to Karnataka. The selection was made purely on the basis of merit taking into consideration the M. B. B. S. marks and performance in the interview.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ಬಳ್ಳಾರಿ ವೈದ್ಯಕೀಯ ಕಾಲೇಜು ಒಂದನ್ನು ಬಿಟ್ಟು ಎಲ್ಲ ಸರ್ಕಾರೀ ವೈದ್ಯಕೀಯ ಕಾಲೇಜುಗಳನ್ನು ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ರೆಕಗ್ನೈಸ್ ಮಾಡಿದ್ದಾರೆ ಎಂದು ಹೇಳಿದೀರಿ. ಇದಕ್ಕೆ ಕಾರಣ ಏನು ಎಂದು ಕೇಳಿದ್ದಕ್ಕೆ ಅದಕ್ಕೆ ಸಾಕಷ್ಟು ಸ್ಟಾಫ್ ಇಲ್ಲ ಎಂದು ಹೇಳಿದ್ದೀರಾ, ಇವೊತ್ತು ಬೆಂಗಳೂರಿನಲ್ಲೆರತಕ್ಕಂಥಾ ಮೆಡಿಕಲ್ ಕಾಲೇಜು ಏನು ಇದೆ ಅಲ್ಲಿ ಕ್ಲಿನಿಕಲ್

ಸೈಡ್‌ನಲ್ಲಿ ಸಾಧಾರಣವಾಗಿರತಕ್ಕಂಥ ಸ್ಟಾಫ್‌ಗಿಂತ ಜಾಸ್ತಿ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ? ಒಂದು ಕಡೆ ಸ್ಟಾಫ್ ಜಾಸ್ತಿ ಇರುವುದು ಇನ್ನೊಂದು ಕಡೆ ಸ್ಟಾಫ್ ಕಡಿಮೆ ಇರುವುದು ಏನು ಇದೆ ಇದನ್ನು ಸರಿದೂಗಿಸಬಾರದೇ ? ಒಳ್ಳೆರಿ ವೆಟರಿನರಿ ಕಾಲೇಜು ಅಂತಹ ಕಡೆ ಸ್ಟಾಫ್ ಕಡಿಮೆ ಏನು ಇದೆ ಅಂಥಾ ಕಡೆಗೆ ಜಾಸ್ತಿ ಜನ ಎಲ್ಲಿದ್ದಾರೋ ಅಲ್ಲಿಂದ ಏಕೆ ತೆಗೆದುಹಾಕಿ ಕೆಲಸ ಮಾಡಿಸಬಾರದು ? ಜಾಸ್ತಿ ಸ್ಟಾಫ್ ಇರುವ ಕಡೆಯಿಂದ ಕಡಿಮೆ ಸ್ಟಾಫ್ ಇರುವ ಕಡೆಗೆ ಸ್ವಲ್ಪ ಜನರನ್ನು ಪೋಸ್ಟ್ ಮಾಡಿ ಕೆಲಸ ಮಾಡಿಸಬಹುದಲ್ಲವಾ, ಈ ರೀತಿ ಮಾಡಿ ಸ್ಟಾಫ್‌ನ ಕೊರತೆ ತುಂಬಬಹುದಲ್ಲವಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಇದ್ದರಲ್ಲಿ ಸ್ಟಾಫ್ ಪ್ರಶ್ನೆ ಒಂದೇ ಅಲ್ಲ, ಬಿಲ್ಡಿಂಗ್ ಪ್ರಶ್ನೆಯೂ ಇದೆ. ಇದಕ್ಕೆ ಕಟ್ಟಡ ಕಟ್ಟುವುದಕ್ಕೆ ಮಂಜೂರಾತಿ ಆಗಿದೆ, ಕೆಲಸವೂ ಕೂಡ ನಡೆಯುತ್ತಾ ಇದೆ. ಇನ್ನೂ ಸ್ವಲ್ಪ ಕೆಲಸಗಳು ಆಗಬೇಕಾಗಿದೆ ಅದಕ್ಕೆ ಪೋಸ್ಟಿಂಗ್ಸ್ ಕೂಡ ಮಾಡುತ್ತಾ ಇದ್ದೇವೆ ಇಂಡಿಯನ್ ವೆಟರಿನರಿ ಕೌನ್ಸಿಲ್‌ನವರು ಇನ್ನು ಏನೇನು ಅವಶ್ಯಕತೆ ಬೇಕು ಅಂತ ಹೇಳಿದ್ದಾರೋ ಅದನ್ನೂ ಕೂಡ ಪೂರೈಸಿಕೊಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಭಾರತ ವೈದ್ಯಕೀಯ ಪರಿಷತ್ತಿನವರು ಕೆಲವು ಷರತ್ತುಗಳನ್ನು ವಿಧಿಸಿದ್ದಾರೆ. ವರ್ಷಕ್ಕೆ ೧೮೦ ಮಂದಿಗೆ ಪ್ರವೇಶ ನೀಡಲು ವೈದ್ಯಕೀಯ ಕಾಲೇಜು ಒಂದಕ್ಕೆ ಕನಿಷ್ಠ ಗುಣಮಟ್ಟದ ಅಗತ್ಯತೆ ಮತ್ತು ಇನ್ನೂ ಇತರರ ಅವಶ್ಯಕತೆಗಳು ಹೀಗಿರಬೇಕು ಎಂದು ಹೇಳಿದ್ದಾರೆ ಈ ರೀತಿಯ ಅವರ ಒಂದು ಗೈಡ್‌ಲೈನ್ ಪ್ರಕಾರ ಇದನ್ನು ರೆಕಗ್ನೈಸ್ ಮಾಡಬೇಕಾದರೆ ಹಿಂದೆ ಇದ್ದದ್ದಕ್ಕಿಂತಲೂ ಈಗ ಇದರ ಅಡ್ಮಿಷನ್ ಕಡಿಮೆ ಮಾಡಿದ್ದಾರೆ. ಮೊದಲು ೨೮೦-೩೦ ಅಡ್ಮಿಷನ್ ಮಾಡಿಕೊಳ್ಳುತ್ತಿದ್ದರು ಈಗ ಅದನ್ನು ಕಡಿಮೆ ಮಾಡಿ ೧೨೦ ಜನಕ್ಕೆ ಇಳಿಸಿದ್ದಾರೆ. ಈ ೧೮೦ ಜನರನ್ನೂ ಕೂಡ ತೆಗೆದುಕೊಳ್ಳುವಂಥಾ ಸನ್ನಿವೇಶದಲ್ಲಿ ನಮ್ಮ ಸ್ಟಾಫ್ ಎಷ್ಟು ಇರಬೇಕು ಅನ್ನುವುದನ್ನು ಅವರು ನಿರ್ಧಾರ ಮಾಡಿದ್ದಾರೆಯೇ ? ಹಾಗೆ ಅವರು ನಿರ್ಧಾರ ಮಾಡಿದ್ದರೆ ಎಲ್ಲಿ ಸ್ಟಾಫ್ ಜಾಸ್ತಿ ಇದೆಯೋ ಅಲ್ಲಿಂದ ಕಡಿಮೆ ಸ್ಟಾಫ್ ಇರುವ ಕಡೆ ಪೋಸ್ಟ್ ಮಾಡಿ ಸರಿದೂಗಿಸಬಹುದಲ್ಲವಾ ?

ಶ್ರೀ ಎಚ್. ಎಂ ಚನ್ನಬಸಪ್ಪ.—ಇಂಡಿಯನ್ ವೆಟರಿನರಿ ಕೌನ್ಸಿಲ್‌ನವರು ಆಯಾಯ ಜಾಗದಲ್ಲಿ ಎಷ್ಟೆಷ್ಟು ಸೀಟುಗಳು ಎಷ್ಟೆಷ್ಟು ಸಿಬ್ಬಂದಿ ಇರಬೇಕು ಅನ್ನುವುದನ್ನು ನಾವು ಸರೀಕ್ಷಣೆ ಮಾಡುತ್ತಿದ್ದೇವೆ ವಿನಾ ಅನವಶ್ಯಕವಾಗಿ ಇರುವಂಥಾ ಯಾವ ಕೆಲಸಗಳನ್ನೂ ಕೂಡ ನಾವು ಮಾಡುತ್ತಾ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ —ಈಗ ೧೮೦ ಸೀಟುಗಳು ಇರಬೇಕು ಎಂದು ಏನು ನಿಗದಿ ಮಾಡಿದ್ದಾರೆ ಇದನ್ನು ಯಾವ ಆಧಾರದ ಮೇಲೆ ಮಾಡಿದ್ದಾರೆ ಮತ್ತು ನಮ್ಮಲ್ಲಿರತಕ್ಕಂಥಾ ಖಿ ಸರ್ಕಾರೀ ಕಾಲೇಜುಗಳಲ್ಲೂ ಕೂಡ ಅವರು ನಿಗದಿ ಮಾಡಿರತಕ್ಕಂಥಾ ಸ್ಕೇಲ್ ಪ್ರಕಾರ ನಿಮ್ಮ ಸಿಬ್ಬಂದಿ ಇದೆಯೇ? ಒಂದು ವೇಳೆ ಇಲ್ಲದೇ ಇದ್ದರೆ ಯಾವ ಕಾಲೇಜಿನಲ್ಲಿ ಸಿಬ್ಬಂದಿ ಕಡಿಮೆ ಇದೆ ಅನ್ನುವುದನ್ನು ಹೇಳುತ್ತೀರಾ?

SRI H. M. CHANNABASAPPA.—I would like to have a notice on this.

ಶ್ರೀ ಕಾಗೋಡು ತಿಮ್ಮಪ್ಪ —ತಾವು ಈ ಪ್ರಶ್ನೆಯ (ಬಿ) ಗೆ ಉತ್ತರವಾಗಿ ೧೯೭೬ನೇ ಸಾಲಿನಲ್ಲಿ ಸ್ನಾತಕೋತ್ತರ ವ್ಯಾಸಂಗಕ್ಕಾಗಿ ೨೬೧ ಮಂದಿ ವ್ಯಕ್ತಿಗಳನ್ನು ಆಯ್ಕೆ ಮಾಡಲಾಗಿದೆ, ಆ ಪೈಕಿ ೧೯೭ ಮಂದಿ ವ್ಯಕ್ತಿಗಳು ಕರ್ನಾಟಕ ರಾಜ್ಯಕ್ಕೆ ಸೇರಿದವರು ಹಾಗೂ ಉಳಿದ ಮಂದಿ ವ್ಯಕ್ತಿಗಳು ಇತರ ರಾಜ್ಯಗಳಿಗೆ ಸೇರಿದವರು ಎಂದು ಹೇಳಿದ್ದೀರಿ. ಆದಾಗ್ಯೂ ಇನ್ನೊಂದು ಇದೇ ಪ್ರಶ್ನೆಗೆ ಏನು ಹೇಳಿದ್ದೀರಿ ಎಂದರೆ ರಾಜ್ಯದಲ್ಲಿನ ವ್ಯಕ್ತಿಗಳಿಂದ ಸಾಕಷ್ಟು ಅರ್ಜಿಗಳು ಬಂದಿದ್ದವು ಅಂತ ಹೇಳಿದ್ದೀರಿ. ಹೀಗಿರುವಾಗ ನಮ್ಮ ರಾಜ್ಯದ ಒಳಗೇನೇ ಇಷ್ಟೊಂದು ಅಭ್ಯರ್ಥಿಗಳು ಇರುವಾಗ ಹೊರಗಿನವರನ್ನ ಇನ್ನೂ ಕೈಬಿಡದೇ ಇರುವುದಕ್ಕೆ ಕಾರಣ ಏನು ?

ಶ್ರೀ ಎಚ್. ಎಂ. ಚೆನ್ನಬಸಪ್ಪ.— ಹಿಂದಿನಿಂದಲೂ ಕೂಡ ಒಂದು ಪದ್ಧತಿ ಬಂದಿದೆ ಗೌರ್ನಮೆಂಟ್ ಟು ಗೌರ್ನಮೆಂಟ್ ಬೇಸಿಸ್ ಮೇಲೆ ಆಯ್ಕೆ ಮಾಡತಕ್ಕಂಥಾ ಪದ್ಧತಿ ಹಿಂದಿನಿಂದಲೂ ಬರುತ್ತಾ ಇದೆ. ಅವರ ಕ್ವಾಲಿಫಿಕೇಷನ್ ಮತ್ತು ಮೆರಿಟ್ಸ್ ಮೇಲೆ ತೆಗೆದುಕೊಳ್ಳುತ್ತಾ ಇದ್ದರು. ಈಗ ನಮ್ಮ ರಾಜ್ಯದಲ್ಲೇ ಹೆಚ್ಚು ಅಭ್ಯರ್ಥಿಗಳು ಇರುವಾಗ ಹೊರಗಿನವರನ್ನು ಏತಕ್ಕೆ ತೆಗೆದುಕೊಳ್ಳಬೇಕು ನಮ್ಮ ರಾಜ್ಯದಲ್ಲಿ ಇರುವವರನ್ನೇ ತೆಗೆದುಕೊಳ್ಳಬೇಕು ಎಂದು ಹುಕುಂ ಮಾಡಿದ್ದೇನೆ. ಅದಲ್ಲದೇ ನಮ್ಮ ರಾಜ್ಯದಲ್ಲಿ ಸೇವೆಯಲ್ಲಿ ಇರತಕ್ಕಂಥ ಜನರಿಗೆ ಪ್ರಿಫರೆನ್ಸ್ ಕೊಡಬೇಕು ಅಂತ ಹುಕುಂ ಮಾಡಿದ್ದೇನೆ,

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ಬಳ್ಳಾರಿ ವೈದ್ಯಕೀಯ ಕಾಲೇಜನ್ನು ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ರೆಕಗ್ನೈಸ್ ಮಾಡಿಲ್ಲಾ. ಆದುದರಿಂದ ಇದರಲ್ಲಿ ಪಾಸಾಗಿರತಕ್ಕಂಥಾ ವಿದ್ಯಾರ್ಥಿಗಳಿಗೆ ಬೇರೆ ಕಡೆ ಕೆಲಸ ಸಿಗಬೇಕಾದರೆ ಕಷ್ಟ. ಆದ್ದರಿಂದ ಈ ಕಾಲೇಜಿಗೆ ರೆಕಗ್ನೈಷನ್ ಪಡೆಯುವುದಕ್ಕೆ ತಾವು ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ನಾನು ಮೊನ್ನೆ ದಿವಸ ಬಳ್ಳಾರಿ ಮೆಡಿಕಲ್ ಕಾಲೇಜಿಗೆ ಹೋಗಿ ವಿಸಿಟ್ ಮಾಡಿಕೊಂಡು ಬಂದಿದ್ದೇನೆ ಅದನ್ನು ರೆಕಗ್ನೈಸ್ ಮಾಡುವುದಕ್ಕೆ ಏನೇನು ಅವಶ್ಯಕತೆ ಬೇಕಾಗಿದೆಯೋ ಅದನ್ನು ಮಾಡುವುದಕ್ಕೆ ಆದೇಶ ನೀಡಿ ಬಂದಿದ್ದೇನೆ ಕಟ್ಟಡ ಪೂರೈಸುವ ಬಗ್ಗೆಯೂ ಇನ್ನು ಇತರ ಕೆಲಸಕಾರ್ಯಗಳ ಬಗ್ಗೆಯೂ ಏನೇನು ಆಗಬೇಕೋ ಅದು ಆಗುತ್ತಾ ಇವೆ. ಆ ಕಟ್ಟಡದ ಕೆಲಸ ಮುಗಿದ ಮೇಲೆ ಇನ್ನು ಉಳಿದಿರುವುದು ಪೋಸ್ಟಿಂಗ್ಸ್ ಅದು ನಮ್ಮ ಕೈಯ್ಯಲ್ಲೇ ಇರುವುದರಿಂದ ಆ ಕೆಲಸವನ್ನು ಆದಷ್ಟು ಜಾಗ್ರತೆ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಪ್ರಶ್ನೆಯ (ಅ) ಗೆ ಉತ್ತರವಾಗಿ ೭೮. ಮತ್ತು ಆ ಪ್ರೈಕಿ ಭಾರತ ವೈದ್ಯಕೀಯ ಪರಿಷತ್ತಿನವರು ೨೩ ಕಾಲೇಜುಗಳನ್ನು ಮಾತ್ರ ಮಾನ್ಯತೆ ಗೊಳಿಸಿದ್ದಾರೆ ಅಂತ ಹೇಳಿದ್ದೀರಿ. ಈ ಪೋಸ್ಟ್ ಗ್ರಾಜುಯೇಟ್ ಕೋರ್ಸನ್ನು ಅವರೇ ಕಂಡಕ್ಟ್ ಮಾಡಿದರೂ ಕೂಡ ಅದರಲ್ಲಿ ಇನ್ನೂ ಉಳಿದವುಗಳನ್ನು ಅಂದರೆ ೫೫ ಕಾಲೇಜುಗಳನ್ನು ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ಇನ್ನೂ ರೆಕಗ್ನೈಸ್ ಮಾಡಿಲ್ಲ ಅವರು ಉಳಿದವುಗಳನ್ನು ರೆಕಗ್ನೈಸ್ ಮಾಡದೇ ಇರುವುದರಿಂದ ಆ ಎಕ್ಸಾಮಿನೇಷನ್ ಅನ್ನು ಯಾವ ರೀತಿ ಕಂಡಕ್ಟ್ ಮಾಡಿದರೂ ಸಹ ಅದಕ್ಕೆ ಬೆಲೆ ಇಲ್ಲದೇ ಇರುವ ಹಾಗೆ ಇದೆ. ಆದುದರಿಂದ ಈ ೫೫ ಕ್ಕೂ ಕೂಡ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರಿಂದ ರೆಕಗ್ನೈಷನ್ ಪಡೆಯಬೇಕಾದರೆ ಅವರು ಈ ಬಗ್ಗೆ ಏನು ಗೈಡ್‌ಲೈನ್ ಹಾಕಿಕೊಟ್ಟಿರುತ್ತಾರೋ ಅದರ ಪ್ರಕಾರ ಎಕ್ಸಾಮಿನೇಷನ್ ನಡೆಸಿ ಆದಷ್ಟು ಬೇಗ ಇವುಗಳನ್ನು ರೆಕಗ್ನೈಸ್ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅವರು ಆಗಿಂದಾಗ್ಗೆ ಬಂದು ಕಾಲೇಜುಗಳನ್ನು ವಿಸಿಟ್ ಮಾಡುತ್ತಾರೆ. ಮತ್ತು ಇದಕ್ಕೆ ರೆಕಗ್ನೈಷನ್ ಪಡೆಯಬೇಕಾದರೆ ಇಂತಿಂಥಾದ್ದು ಮಾಡಬೇಕು ಎಂದು ಹೇಳಿ ಹೋಗಿದ್ದಾರೆ, ಅದನ್ನು ನಾವು ಮಾಡುತ್ತಿದ್ದೇವೆ. ಪುನಃ ಅವರು ಬಂದಾಗ ಮತ್ತೆ ನಾವು ಒತ್ತಾಯ ಮಾಡುತ್ತೇವೆ. They will give the recognition.

Construction of a Bridge near Khilegaon

511 SRI A.A. DESAI (Athani).—Will the Minister for Public Works be pleased to state.—

(a) whether the Government had assured in the Assemblyin the last session that bridge across Agrani Nala near Khilegaon on Khilegaon Pandegaon road will be constructed.

(b) if so, whether the plans and estimates in respect of this bridge have been prepared.

(c) whether the Government propose to take up the work immediately ?

SRI M MALLIKARJUNA SWAMY (Minister for Public Works)—

(a) No.

(b) Plans and estimates are under preparation.

(c) Work will be taken up subject to availablity of funds